ಚೆಂದ ಸಿನಿಮಾ ಆಕೃತಿ. ಫಿಲ್ಮ್‌ಸ್ಕ್ರಿಪ್ಟ್ ನಾನು ಬರೀತೇನಿ" ಅಂದರು. ಮುಂದೆ ಒಂದೇ ವಾರದಲ್ಲಿ, ನಾನು ಕತೆಯಲ್ಲಿ ಸೇರಿಸದಿದ್ದ ಇನ್ನಷ್ಟು ವಿವರಗಳನ್ನೂ ಕೂಡಿಸಿ, ದೊಡ್ಡ ಹಾಳೆಗಳಲ್ಲಿ, 'ವಿಘಟನೆ' ಹೆಸರಿನ, 60 ಪುಟದಷ್ಟು ಸ್ಕ್ರೀನ್‌ಪ್ಲೇ ಬರೆದೇ ಬಿಟ್ಟರು. ಮಾಳಮಡ್ಡಿಯಲ್ಲೇ ಇದ್ದ ಶಂಕರ ಮೊಕಾಶಿ ಪುಣೇಕರ ಅವರ ಮನೆಯಲ್ಲಿ, 2–3 ತಾಸು ಹರಟೆ ಹೊಡೆಯುತ್ತ, ಓದಿದೆವು. ಅಷ್ಟು ಹೊತ್ತಿಗಾಗಲೇ ಆಈ ಸಿನೆಮಾ ಅಂತ ಓಡಾಡುತ್ತಿದ್ದ ಅವರ ಮಗ, ವಸಂತ ಮೊಕಾಶಿ ಅದನ್ನು ತಾನೇ ಸಿನೆಮಾ ಮಾಡುವುದಾಗಿ ಹೇಳಿದ. 'ವಿಘಟನೆ'ಯ ಒಂದು ಪ್ರತಿ ನಾನು ಝೆರಾಕ್ಸ್ ಮಾಡಿಸಿಕೊಂಡೆ. ಮುಂದೆ ಒಮ್ಮೆ ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದ ಬಿ.ವಿ. ಕಾರಂತರು, ಓದಿ ಕೊಡುವೆನೆಂದು, ನನ್ನಲ್ಲಿದ್ದ ಪ್ರತಿ ಮೈಸೂರಿಗೆ ಒಯ್ದರು. ಈಗ ಮೊಕಾಶಿ ವಸಂತನೂ ಕಾಣೆ, ಕಾರಂತರೂ ಮಾಯ! ಇದು 'ವಿಘಟನೆ'ಯ ವಿಘಟನೆ!

ಬಿ.ವಿ. ಕಾರಂತರು ದಿಲ್ಲಿಯ ಪಟೇಲ್ ಸ್ಕೂಲ್‌ನ ಕೆಲಸ ಬಿಟ್ಟು ಧಾರವಾಡಕ್ಕೆ ಬಂದಿದ್ದರು. ಮುಂದಿನ ದಾರಿ ಅವರಿಗೆ ಸ್ಪಷ್ಟವಿರಲಿಲ್ಲ. ಆಗ ಹಳ್ಳಿಕೇರಿ ಚಾಳಿನ ಮನೆಯಲ್ಲಿದ್ದ ದೇಸಾಯರ ಮನೆಗೆ ಅವರನ್ನು ಕರೆದುಕೊಂಡು ಹೋದೆ. ಅದುಇದು ಮಾತಾಡುತ್ತ ದೇಸಾಯರು, "ನೀವು ನಮ್ಮ ಯೂನಿವರ್ಸಿಟಿಯಲ್ಲಿಯೇ ಒಂದು ವರ್ಕ್‌ಶಾಪ್ ಮಾಡಬಹುದಲ್ಲ! 1–2 ತಿಂಗಳು ಇಲ್ಲಿ ಉಳೀತೀರಾ?" ಅಂತ ಕೇಳಿದರು. ದೇಸಾಯರದು ಯಾವಾಗಲೂ ಎಲ್ಲರ ಬಗೆಗೂ ಸಕಾರಾತ್ಮಕ ಚಿಂತನೆ. ಕಾರಂತರದು ಬದುಕು, ವೃತ್ತಿ, ನಿರ್ದೇಶನ, ಕಾರ್ಯವಿಧಾನದಲ್ಲಿ ಹುಡುಕಾಟದ ಸ್ವಭಾವ. ಕಾರಂತರು ಒಪ್ಪಿದರು. ಮರುದಿನವೇ ಜಿಮಖಾನಾ ಚೇರ್ಮನ್ ಡಾ. ಕೆ.ಜೆ. ಮಹಾಲೆ ಅವರನ್ನು ಒಪ್ಪಿಸಿದರು. ಶಾಂತಿನಾಥರೇ ವೈಸ್‌ಚೇರ್ಮನ್. ಕಾರಂತರಿಗೆ ನಾಟಕ ಕಮ್ಮಟದ ಆಯೋಜನೆ ವಹಿಸಿಬಿಟ್ಟರು. ಇದು ಕಾರಂತರು ನಿರ್ವಹಿಸಿದ ಮೊದಲ ಸಾರ್ಥಕ ಕಮ್ಮಟ, ಅವರ ಬದುಕಿಗೆ ಹೊಸ ತಿರುವು ಬಂತು. ಅದು ಅಸಂಗತ ನಾಟಕ ಚರಿತ್ರೆಗೆ ಹೊಸ ದಾಖಲೆ, ಕವಿವಿಗೆ ನೂತನ ಗರಿಯಾಗಿತ್ತು. ನಾಟಕಗಳ ತಾಲೀಮು ದಿನಾ ಸಂಜೆ ಶಾಂತಿನಾಥರ ಚೇಂಬರ್ದಲ್ಲಿಯೇ ನಡೆಯುತ್ತಿತ್ತು. ನಾನು, ಚಂಪಾ, ತೋಂಟದಾರ್ಯ, ಮುರಿಗೆಪ್ಪ, ಅನಿತಕುಮಾರ್ ಮುಂತಾದ ಎಲ್ಲರೂ ರಂಗಕ್ಕೆ ಸಮರ್ಪಿತರಾದೆವು. ಮುಂದೆ ಮೂರು ದಿನಗಳ ನಾಟಕೋತ್ಸವವನ್ನೂ ಆಯೋಜಿಸಿದೆವು; 'ಗುರ್ತಿನವರು' (ಚಂಪಾ), 'ಕತ್ತಲೆ–ಬೆಳಕು' (ಶ್ರೀರಂಗ), 'ಗೋಡೆ' (ನ. ರತ್ನ) ನಾಟಕ ಪ್ರದರ್ಶಿಸಿದೆವು. ಕಾರಂತರು ಹಾಗೂ ಅವರ ನಾಟಕಗಳು ಬೆಂಗಳೂರಿಗರ ಕಣ್ಣಿಗೆ ಕಂಡಿದ್ದು ಈ ಕಮ್ಮಟದ ಅನಂತರವೇ.

ಕಮ್ಮಟದ ಸಮಾರೋಪದ ಅನಂತರ ನಮ್ಮ 'ಅಂತರಂಗ' ನಾಟಕಕೂಟ ಆರಂಭವಾಯಿತು. ಅದಕ್ಕೆ ಶಾಂತಿನಾಥರೇ ಅಧ್ಯಕ್ಷರು. ಶ್ರೀರಂಗರ ಸಲಹೆಯಂತೆ ಒಮ್ಮೆ ನಾಟಕೋತ್ಸವ ನಡೆಸಿದೆವು. ಸಂಪಿಗೆ ತೋಂಟದಾರ್ಯರ ನಿರ್ದೇಶನದಲ್ಲಿ ಬಾದಲ್ ಸರ್ಕಾರ್ ಅವರ 'ಬಾಕಿ ಇತಿಹಾಸ' ಮಾಡಲು ಶಾಂತಿನಾಥರೇ ಸೂಚಿಸಿದರು. ತಮಗೆ ಇಷ್ಟವಾಗಿದ್ದ ಆ ನಾಟಕದಲ್ಲಿ ಅವರು ಸ್ವತಃ ಪಾತ್ರ ವಹಿಸಿ ಅಭಿನಯಿಸಿದರು. ಶಾಂತಿನಾಥರಲ್ಲಿ ಹುದುಗಿದ್ದ ಒಬ್ಬ ನಟನನ್ನು ಕಂಡು ನಮಗೂ ಹೆಮ್ಮೆಯೆನಿಸಿತ್ತು.

ದೇಸಾಯರು ಶಿವಾಜಿ ವಿದ್ಯಾಪೀಠದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ಕೊಲ್ಹಾಪುರಕ್ಕೆ ಹೋದದ್ದರಿಂದ ಅವರ ಪತ್ನಿ ಸುಮಿತ್ರಾರಿಗೆ ಅಪಾರ ಸಂತೋಷವಾಗಿತ್ತು. ಕೊಲ್ಹಾಪುರ ಅವರ ತವರುಮನೆ. ಆದರೆ, ವೈಯಕ್ತಿಕವಾಗಿ ಶಾಂತಿನಾಥರು ಧಾರವಾಡದಿಂದ ದೂರವಾಗತೊಡಗಿದರು. ಇಲ್ಲಿ ನಾರಾಯಣಪುರದಲ್ಲಿದ್ದ ಸೈಟನ್ನೂ ಮಾರಿದರು. ದೇಸಾಯಿ ಪರಿವಾರದೊಂದಿಗೆ ನನ್ನ ಸ್ನೇಹ ಮಾತ್ರ ಅಬಾಧಿತವಾಗಿ ಉಳಿಯಿತು. ಅಲ್ಲಿಗೆ ಹೋದ ಮೇಲೆ ತಪ್ಪದೇ ಪತ್ರ ಬರೆಯತೊಡಗಿದರು. ಅವರ ಅಕ್ಷರ ಅವರಷ್ಟೇ ಮುದ್ದು, ಸೊಗಸು. ತಮ್ಮ ದೈನಂದಿನ ವಿವರ,